(x) ಬಂಟ್ವಾಳ ತಾಲ್ಲೂಕಿನ ತುಂಬೆಯಲ್ಲಿರುವ ಬೀಡಿ ಕಾರ್ಮಿಕರ ಚಿಕಿತ್ಸಾಲಯದಲ್ಲಿ ದಾದಿಯೊಬ್ಬಳ ನಿರ್ಲಕ್ಷ್ಯತನದಿಂದ ಒಬ್ಬ ರೋಗಿ ಮರಣ ಹೊಂದಿದ ಬಗ್ಗೆ

ಶ್ರೀ ಎ. ರುಕ್ಮಯ್ಯ ಪೂಜಾರಿ.—ಅಧ್ಯಕ್ಷರೆ, ಬಂಟ್ವಾಳ ತಾಲ್ಲೂಕಿನ ತುಂಬೆಯಲ್ಲಿರುವ ಬೀಡಿ ಕಾರ್ಮಿಕರ ಚಿಕಿತ್ಸಾಲಯದಲ್ಲಿ ತಾರೀಖು ೫-೧-೮೪ರ ಗುರುವಾರದಂದು ಅಲ್ಲಿಯ ದಾದಿ ಇಂಜೆಕ್ಷನ್ ಕೊಟ್ಟು ತಕ್ಷಣವೆ ವೆಂಕಪ್ಪ ಪೂಜಾರಿ ಎಂಬುವರು ಸಾವನ್ನಪ್ಪಿದರು. ಡಾಕ್ಟರ್‌ರವರು ಸರಿಯಾಗಿ ಪರೀಕ್ಷೆ ಮಾಡಿ ಇಂಜೆಕ್ಷನ್ ಕೊಡುವಂತೆ ದಾದಿಯವರಲ್ಲಿ ಬರೆದುಕೊಟ್ಟರೆಂದೂ ದಾದಿ ಇಂಜೆಕ್ಷನ್ ಕೊಡುತ್ತಿರುವಾಗಲೇ ಮರಣಾಂತಿಕತಕನಾಗಿ ಬೊಬ್ಬಿಟ್ಟ ವೆಂಕಟಪ್ಪ ಪೂಜಾರಿಯವರು ಒಂದೆರಡು ಕ್ಷಣದಲ್ಲೇ ಕುಸಿದು ಬಿದ್ದು ಮರಣ ಹೊಂದಿದರೆಂದೂ ಅಲ್ಲಿಗೆ ಮದ್ದಿಗೆ ಹೋದವರು ಪ್ರತ್ಯಕ್ಷವಾಗಿ ಕಂಡದ್ದನ್ನು ಹೇಳುತ್ತಿದ್ದಾರೆ.

ಈ ಮರಣ ಸ್ವಾಭಾವಿಕವಾಗಿ ಆಗದೆ ದಾದಿಯರ ನಿರ್ಲಕ್ಷ್ಯದಿಂದ ಆದದ್ದೆಂದು ಮನಗಂಡ ಊರವರು ಇದನ್ನು ತನಿಖೆ ಮಾಡಬೇಕೆಂದು ವೆಲ್‌ಫೇರ್ ಆಫೀಸರ್, ಬೆಂಗಳೂರು ಇವರಿಗೆ ಮನವಿ ಸಲ್ಲಿಸಿದ್ದರೂ ಇದರ ಬಗ್ಗೆ ಯಾವುದೇ ಸೂಕ್ತ ತನಿಖೆ ನಡೆಸಿಲ್ಲವೆಂದು ಊರವರು ದೂರುತ್ತಿದ್ದಾರೆ. ಅದೂ ಅಲ್ಲದೆ ಈಗ ಆ ಚಿಕಿತ್ಸಾಲಯಕ್ಕೆ ಮದ್ದಿಗಾಗಿ ಹೋಗುವವರ ಸಂಖ್ಯೆ ಕೂಡ ಬಹಳ ಕಡಿಮೆಯಾಗಿದೆ. ಆದುದರಿಂದ ತಾವು ಈ ಬಗ್ಗೆ ಸೂಕ್ತ ತನಿಖೆ ಮಾಡಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಇನ್ನು ಮುಂದೆ ಇಂತಹ ಅವ್ಯವಸ್ಥೆಗಳು ಆಗದಂತೆ ಸರಕಾರ ಎಚ್ಚರ ವಹಿಸಬೇಕೆಂದು ಸರಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ವರದಿ ತರಿಸುತ್ತೇನೆ.

ಡಾ|| ವಿ. ಎಸ್. ಆಚಾರ್ಯ.—ತೀರಿಕೊಂಡವರು ಬಡವರು. ಅದು ಪೆನ್ಸಿಲಿನ್ ಅಥವಾ ಬೇರೆ ಡ್ರಗ್‌ನ ರಿಯಾಕ್ಷನ್ ಇರಬಹುದು. ಆದರೆ ರಿಯಾಕ್ಷನ್ ಬಗ್ಗೆ ಏನೂ ಪ್ರಯತ್ನ ಮಾಡಿಲ್ಲ. ಅದಕ್ಕೆ ಅವಕಾಶವೂ ಇರಲಿಲ್ಲ. ಇಂಥ ಸಂದರ್ಭಗಳಲ್ಲಿ ಏನು ಮಾಡಬೇಕೆಂದು ಹೇಳುವುದಾದರೆ ಯಾವುದೇ ತರಹದ ಆಸ್ಪತ್ರೆಯಾಗಿರಲಿ ಡ್ರಗ್ ರಿಯಾಕ್ಷನ್ ಆಗುವಂಥ ಇಂಜೆಕ್ಷನ್‌ಗಳನ್ನು ಎಲ್ಲಿಟ್ಟಾಗ ಅದರ ರೆಸಿಸಿಟೆನ್ಷನ್‌ಗೆ ಬೇಕಾದ ವ್ಯವಸ್ಥೆಯನ್ನು ಸಹ ಮಾಡಬೇಕು. ಒಡಪಾಯಿಗಳು ಸತ್ತು ಹೋದರೆ ಪರಿಹಾರ ಕೊಡುತ್ತೀರಿ ಅದು ಮುಖ್ಯವಲ್ಲ. ಆದರೆ ರೆಸಿಸಿಟೆನ್ಸ್‌ಗೆ ವ್ಯವಸ್ಥೆ ಇರಬೇಕು ಜೀವ ಉಳಿಸುವಂಥ ಮದ್ದು ಇರಬೇಕು. ಅದು ಇಲ್ಲದಿರುವುದರಿಂದ ಈ ತರಹ ತೊಂದರೆಗಳಾಗುತ್ತವೆ. ಆದ್ದರಿಂದ ಈ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸೂಚನೆಯಲ್ಲಿರುವುದು ಬೇರೆ, ಮಾನ್ಯ ಸದಸ್ಯರು ಹೇಳಿರುವುದು ಬೇರೆ. ಆದರೂ ನಾನು ವಿಷಯ ತರಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ರಿಯಾಕ್ಷನ್ ಆಗುವ ಡ್ರಗ್‌ಗಳನ್ನು ಕೊಡುವ ಮೊದಲು ಒಂದು ನಿಮಿಷ ಪರೀಕ್ಷೆ ಮಾಡಿ ತಿಳಿದುಕೊಂಡು ನಂತರ ಕೊಡಬೇಕು. ಆ ರೀತಿ ಏತಕ್ಕೆ ಮಾಡಲಿಲ್ಲ ?

(xi) ಬೆಂಗಳೂರು ನಗರದ ಕಬ್ಬನ್ ಪೇಟೆಯ ರಿಕ್ರಿಯೇಷನ್ ಕ್ಲಬ್ ಮೇಲೆ ಪೋಲೀಸಿನವರು ದಾಳಿ ನಡೆಸಿರುವ ಬಗ್ಗೆ

ಅಧ್ಯಕ್ಷರು.—ಶ್ರೀ ಕೆ. ಶಿವಮೂರ್ತಿಯವರೆ, ರಿಕ್ರಿಯೇಷನ್ ಕ್ಲಬ್ ಬಗ್ಗೆ ನಿನ್ನೆ ದಿವಸ ರಾವ್ ದೇವ್ ಅವರು ಎತ್ತಿದರು. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ. ಶಿವಮೂರ್ತಿ.—ನಾನು ನಿರ್ದಿಷ್ಟವಾಗಿ ಕೆಲವರ ಮೇಲೆ ಆಪಾದನೆ ಮಾಡುತ್ತಿದ್ದೇನೆ. ಆಲ್ಲಿ ನಡೆದಿರತಕ್ಕ ಘಟನೆಯ ಬಗ್ಗೆ ತಮ್ಮ ಅನುಮತಿ ಮೇಲೆ ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು.—ನೋಟೀಸ್ ಓದಿ.